ಪ್ರತಿ ಕಡತದಲ್ಲೂ ಅಂದಾಜು ಇಪ್ಪತ್ತು ಪುಟಗಳು.

- ಕಛೇರಿಯಲ್ಲಿರುವ ಇಲಿಗಳ ಸಂಖ್ಯೆ – ಅಂದಾಜು ಐವತ್ತು. ಪ್ರತಿ ಇಲಿಯೂ ದಿನವೊಂದರಲ್ಲಿ ಎರಡು ಪುಟಗಳನ್ನು ತಿಂದರೂ, ದಿವಸಕ್ಕೆ ನೂರು ಪುಟಗಳನ್ನು ತಿನ್ನುತ್ತದೆ.
- ಇದೇ ಅಂದಾಜಿನ ಪ್ರಕಾರ ಐದೂವರೆ ವರ್ಷಗಳಲ್ಲಿ ಇರುವ ಕಡತಗಳೆಲ್ಲ ನಾಶವಾಗುತ್ತವೆ. ಇದು ಸರಳ ಲೆಕ್ಕ. ಇಲಿಗಳ ಸಂತಾನೋತ್ಪತ್ತಿಯನ್ನು ಗಣನೆಗೆ ಇದು ತೆಗೆದುಕೊಂಡಿಲ್ಲ. ಇಲಿಗಳನ್ನು ಕೊಲ್ಲದೆ ಬಿಟ್ಟರೆ, ಪ್ರತಿ ಹೆಣ್ಣು ಇಲಿ ವರ್ಷವೊಂದರಲ್ಲಿ ಹದಿನೈದು ಸಾವಿರ ಮರಿಗಳನ್ನು ಇಡಬಹುದು. ಇಲ್ಲಿರುವ ಇಲಿಗಳಲ್ಲಿ ಮೂರರಲ್ಲಿ ಒಂದು ಹೆಣ್ಣು ಇಲಿ ಇದ್ದರೂ, ಅದರಲ್ಲಿ ಅರ್ಧದಷ್ಟಕ್ಕೆ ಮರಿಗಳನ್ನು ಇಡಲು ಸೂಕ್ತ ಪರಿಸರ ಮತ್ತು ಅವಕಾಶಗಳು ದೊರೆತರೂ, ಇಟ್ಟ ಮರಿಗಳಲ್ಲಿ ಅರ್ಧದಷ್ಟೇ ಬದುಕುಳಿದರೂ, ವರ್ಷಕ್ಕೆ ಅರವತ್ತು ಸಾವಿರ ಇಲಿಗಳು ನಮ್ಮ ಕಛೇರಿಯಲ್ಲಿ ಹುಟ್ಟುತ್ತವೆ.

'ಅರವತ್ತು ಸಾವಿರ!' – ಬಾಸು ಬೆವೆತು ಹೋದರು. ಈ ದರಿದ್ರ ಕಛೇರಿಯಿಂದ ಹೇಗಾದರೂ ತಪ್ಪಿಸಿಕೊಳ್ಳಬೇಕು. ಹಾಗೆಯೇ ರಾಜೇಶ ತುಂಬ ಹೆದರಿಸ್ತಾ ಇದ್ದಾನೆ, ಅವನಿಗೇನು ಬೇಕೋ ಮಾಡಲು ಬಿಡಬೇಕು, ಇಲ್ಲದಿದ್ದರೆ ಅವನೇ ಇಲಿಗಳನ್ನು ತಂದು ಕಛೇರಿಯಲ್ಲಿ ಬಿಡುವಂತೆ ಕಾಣುತ್ತಾನೆಂದು ಬಾಸು 'ಮೂಷಿಕ ನಿರ್ವಹಣಾ ಸಮಿತಿ'ಯ ರಚನೆಗೆ ಒಪ್ಪಿಗೆ ಕೊಟ್ಟರು. ರಾಜೇಶ ಅಧ್ಯಕ್ಷ, ಮತ್ತು ಅಟೆಂಡರ್ ನಾಗಪ್ಪ ಸದಸ್ಯ.

## ಅವಕಾಶ = ಹಣ, ತುಂಬಾ ಹಣ

ಮೂಷಿಕ ನಿರ್ವಹಣಾ ಸಮಿತಿಯ ಯೋಜನೆಗಳು ಹೀಗಿದ್ದವು:

- ಆಫೀಸಿನಲ್ಲಿ ಇಪ್ಪತ್ತು ಇಲಿ ಬೋನುಗಳನ್ನು ಇಡುವುದು.
- ಪ್ರತಿ ಮುಂಜಾನೆ ಮತ್ತು ಸಂಜೆ ಬೋನುಗಳಲ್ಲಿ ಬ್ರೆಡ್ ತುಣುಕುಗಳನ್ನು ಹಾಕುವುದು.
- ಸಿಕ್ಕಿ ಹಾಕಿಕೊಂಡ ಇಲಿಗಳನ್ನು ವಿಲೇವಾರಿ ಮಾಡುವುದು.
- ಇಲಿಗಳನ್ನು ಬೇಗ ಸಾಯಿಸಲಿಕ್ಕಾಗಿ ಇಲಿ ಪಾಷಾಣವನ್ನು ಸೂಕ್ತ ಸ್ಥಳಗಳಲ್ಲಿ ಇಡುವುದು. ಜೀವನದಲ್ಲಿ ಜಿಗುಪ್ಸೆ ಬಂದ ತಮ್ಮ ಕಛೇರಿಯ ಸಿಬ್ಬಂದಿ ಇದನ್ನು ತಿಂದು ಸಾಯದಂತೆ ಎಚ್ಚರ ವಹಿಸುವುದು.
- ಸತ್ತ ಇಲಿಗಳ ದೇಹವನ್ನು ವಿಲೇವಾರಿ ಮಾಡುವುದು.
- ತಿಂಗಳಿಗೆ ಅಂದಾಜು ವೆಚ್ಚ – ಮೂವತ್ತು ಸಾವಿರ ರೂಪಾಯಿ.

ಮೊತ್ತವನ್ನು ನೋಡಿ ಬಾಸು ಮತ್ತೆ ಬೆವೆತರು.

'ಸಾ... ವರ್ಷಕ್ಕೆ ಅರವತ್ತು ಸಾವಿರ ಇಲಿಗಳು ಸಾ... ತಿಂಗಳಿಗೆ ಐದು ಸಾವಿರ ಇಲಿಗಳು. ಒಂದು ಇಲಿಗೆ ಆರು ರೂಪಾಯಿ ಅಷ್ಟೆ ಸಾ...' ಎಂದ ರಾಜೇಶ.

ಬಾಸು ಬೆವರೊರೆಸಿಕೊಂಡು ಸಹಿ ಹಾಕಿದರು.

## ಹಣ = ತಲೆನೋವು

ಹೀಗೆ ಮುಂದುವರೆದು ರಾಜೇಶ ಮೂರು ತಿಂಗಳಲ್ಲಿ ಒಂದು ಲಕ್ಷದಷ್ಟು ಮೊತ್ತವನ್ನು ಇಲಿಗಳ ಹೆಸರಿನಲ್ಲಿ ನುಂಗಿದ. ಅಟೆಂಡರ್ ನಾಗಪ್ಪನಿಗೆ ಒಂದಿಷ್ಟು ಕೊಡಬೇಕಾಯಿತು.– ಆಗಾಗ ಇಲಿಗಳನ್ನು ಸಾಯಿಸಿ ಏನೋ ಪ್ರಗತಿ ಆಗುತ್ತಿದೆಯೆಂಬಂತೆ ಬಿಂಬಿಸಲು, ಹಾಗೂ ಕೆಲವೊಮ್ಮೆ ಹೊರಗಿನಿಂದ ಇಲಿಗಳನ್ನು ತಂದು ಕಛೇರಿಯಲ್ಲಿ ಬಿಟ್ಟು ಸಮಸ್ಯೆ ಇನ್ನೂ ಜೀವಂತವಿದೆ ಎಂಬ ಭಾವ ಹುಟ್ಟಿಸಲು.

ಇದು ಹೀಗೆಯೇ ಮುಂದುವರೆದರೆ ರಾಜೇಶ ತನ್ನ ಕೆಲಸ ಬಿಟ್ಟು, 'ಮೂಷಿಕ ನಿರ್ವಹಣಾ ಕನ್ಸಲ್ಟನ್ಸಿ' ಯೊಂದನ್ನು ತೆರೆದು ಎಲ್ಲ ಸರಕಾರಿ ಕಛೇರಿಗಳ ಇಲಿಗಳನ್ನೂ ವಿಲೇವಾರಿ ಮಾಡುತ್ತಾ ಸುಖವಾಗಿದ್ದು ಬಿಡುತ್ತಿದ್ದ. ಆದರೆ ಯಾವ ದೇವರಿಗೆ ಇದು ಹಿಡಿಸಲಿಲ್ಲವೋ; ಬಹುಷಃ ಗಣೇಶನಿಗೇ ಇರಬೇಕು, ರಾಜೇಶನ ಮೂಷಿಕ ನಿರ್ವಹಣೆಯ ಸುದ್ದಿ ಅವನ ಇಲಾಖೆಯ ಮೇಲಧಿಕಾರಿಗಳಿಗೆ ತಲುಪಿತು. ಒಂದು ಮುಂಜಾನೆ ಇಲಾಖೆಯಿಂದ ತನಿಖೆಗೆಂದು ಒಬ್ಬ ಅಧಿಕಾರಿ ಬಂದರು. ರಾಜೇಶನ ಬಾಸು ಮತ್ತೆ ಬೆವೆತರು.

ಇನ್‌ಸ್ಪೆಕ್ಟರ್ ಕೇಳಿದ್ದೊಂದೇ – 'ಮೂರು ತಿಂಗಳಲ್ಲಿ ಒಂದು ಲಕ್ಷ ಬೋಳಿಸಿದ್ದೀರ. ಇಲ್ಲಿಯವರೆಗೆ ಎಷ್ಟು ಇಲಿಗಳನ್ನು ಸಾಯಿಸಿದ್ದೀರ?'

'ಸಾ... ದಿವ್ಸಕ್ಕೆ ನೂರು ಇಲಿಗಳ್ನ ಸಾಯಿಸ್ತಾ ಇದ್ದೀವಿ ಸಾ...' – ರಾಜೇಶ ಹೇಳಿದ.

ಇನ್ಸ್‌ಪೆಕ್ಟರ್ ಹೌಹಾರಿದರು. 'ಅಂದ್ರೆ ಮೂರು ತಿಂಗಳಲ್ಲಿ ಒಂದು ಹತ್ತು ಸಾವಿರ ಇಲಿಗಳನ್ನು ಸಾಯ್ಸಿದ್ದೀರ?'

'ಸಾ... ಹೌದು ಸಾ...' ರಾಜೇಶ ಯಾವುದೇ ಅಳುಕಿಲ್ಲದೆ ಹೇಳಿದ.

'ಸರಿ, ನಾಳೆ ನಂಗೆ ನೂರು ಸತ್ತ ಇಲಿಗಳನ್ನು ತೋರ್ಸಿ' ಇನ್ಸ್‌ಪೆಕ್ಟರ್ ಥಟ್ಟನೆ ಹೇಳಿದಾಗ ರಾಜೇಶ, 'ಸಾ...' ಎಂದು ರಾಗವೆಳೆದ.

'ಏನ್ರೀ, ದಿವ್ಸಕ್ಕೆ ನೂರು ಇಲಿಗಳನ್ನು ಸಾಯಿಸ್ತಿದ್ದೀರಲ್ಲ? ನಾಳೆ ತೋರ್ಸಿ, ಅಷ್ಟೆ' ಇನ್ಸ್‌ಪೆಕ್ಟರ್ ಮತ್ತೆ ಹೇಳಿದರು.

ರಾಜೇಶನಿಗೆ ತನ್ನ ಆಟ ಮುಗಿಯಿತೆಂದು ಅರ್ಥವಾಯಿತು. ಅಲ್ಲಿಂದ ಸೀದಾ ಹೊರನಡೆದು ನಾಗಪ್ಪನನ್ನು ಕರೆದು, 'ಎರಡು ಪ್ಯಾಕೆಟ್ ಇಲಿ ಪಾಷಾಣ ಕೊಡು. ತಿಂದು ಸಾಯ್ತೀನಿ. ಇನ್ಸ್‌ಪೆಕ್ಟರ್ ನನ್ ಹೆಣಾ ಎತ್ತಿ..' ಎಂದ. ನಾಗಪ್ಪ ಸಮಾಧಾನಪಡಿಸಿದ.

'ತಲೆ ಕೆಡಿಸ್ಕೋಬೇಡಿ. ನಾಳೆಗೆ ನೂರು ಇಲಿಗಳನ್ನು ತಯಾರು ಮಾಡೋಣ' ಎಂದ ನಾಗಪ್ಪ.

## ತಲೆನೋವು + ಕುತಂತ್ರ = ಆವಿಷ್ಕಾರ

ಮರುದಿನ ಹನ್ನೊಂದು ಗಂಟೆಯ ಹೊತ್ತಿಗೆ ರಾಜೇಶ ಹಾಗೂ ನಾಗಪ್ಪ ಎರಡು ಗೋಣಿಚೀಲಗಳನ್ನು ಹೊತ್ತುಕೊಂಡು ನರಭಕ್ಷಕ ಹುಲಿಯನ್ನು ಕೊಂದ ಬೇಟೆಗಾರರ ಠೀವಿಯಲ್ಲಿ ಕಛೇರಿಗೆ ಬಂದರು. ಎರಡೂ ಚೀಲಗಳನ್ನು ಇನ್ಸ್‌ಪೆಕ್ಟರ್ ಮುಂದಿಟ್ಟರು.

'ಎಲ್ಲಿ, ಓಪನ್ ಮಾಡಿ' ಎಂದರು ಇನ್ಸ್‌ಪೆಕ್ಟರ್ .

ರಾಜೇಶ ಚೀಲವನ್ನು ತೆರೆದು ಒಳಗಿದ್ದದ್ದನ್ನು ಸುರಿದ. ಕಛೇರಿಯ ಮಂದಿ ಚೀತ್ಕರಿಸಿದರು. ಕೆಲವರು ಮೂಗು ಮುಚ್ಚಿಕೊಂಡು ಬಾತ್ ರೂಮಿಗೆ ಓಡಿದರು.

ಇನ್ಸ್‌ಪೆಕ್ಟರ್ ಜಗ್ಗಲಿಲ್ಲ. ಬದಲಿಗೆ ಜೋರಾಗಿ ನಗತೊಡಗಿದರು. ರಾಜೇಶ ಪೆಚ್ಚಾದ. ನಾಗಪ್ಪನಿಗೂ ಇನ್ಸ್‌ಪೆಕ್ಟರ್ ನಗುವಿನ ಅರ್ಥ ತಿಳಿಯಲಿಲ್ಲ.

'ನಿಮ್ಗೆ ಕುತಂತ್ರ ಚೆನ್ನಾಗಿ ಗೊತ್ತಿದೆ. ಆದ್ರೆ ಜ್ಞಾನ ಕಡಿಮೆ. ನೀವು ತಂದಿರೋದು ಹೆಗ್ಣ. ಅದು ಹೊರಗೆ ಮೋರಿಗಳಲ್ಲಿ, ಕಸದ ತೊಟ್ಟಿಗಳಲ್ಲಿ ಇರುತ್ತೆ, ಆಫೀಸ್ ಒಳಗಲ್ಲ. ನಿಮ್ಮ ಆಫೀಸಿನಲ್ಲಿರೋದು ಇಲಿಗಳು, ಹೆಗ್ಣಗಳಲ್ಲ..' – ಇನ್ಸ್‌ಪೆಕ್ಟರ್ ಹೇಳಿದರು.

ರಾಜೇಶನ ಬಾಸಿಗೆ ಬೆವರಿಳಿಯಿತು. ಈ ಬಾರಿ ರಾಜೇಶ, ನಾಗಪ್ಪರಿಗೂ ಬೆವರಿಳಿಯಿತು. ಹಿಂದಿನ ರಾತ್ರಿಯೆಲ್ಲ ನಗರದಲ್ಲಿ ಸುತ್ತಾಡಿ ಹುಡುಕಿ, ಓಡಿಸಿ, ಹಿಡಿದು ಸಾಯಿಸಿ ತಂದ ಹೆಗ್ಗಣಗಳು ಯಾವುದೇ ಪ್ರಯೋಜನಕ್ಕೆ ಬರಲಿಲ್ಲ. ಈ ಇನ್ಸ್‌ಪೆಕ್ಟರ್‌ಗೆ ಇಲಿಗೂ ಹೆಗ್ಗಣಕ್ಕೂ ವ್ಯತ್ಯಾಸ ತಿಳಿದಿರಬಹುದೆಂದು ಅವರಿಬ್ಬರೂ ಊಹಿಸಿರಲಿಲ್ಲ. ಗೊತ್ತಿದ್ದರೆ ಬೇರೇನಾದರೂ ಉಪಾಯ ಹುಡುಕಬಹುದಿತ್ತು.

ಇನ್ಸ್‌ಪೆಕ್ಟರ್ ತಾವೂ ಎರಡು ಚೀಲಗಳನ್ನು ತಂದಿದ್ದರು. ಎರಡನ್ನೂ ಬಿಚ್ಚಿದರು. ಎರಡು ಬೆಕ್ಕುಗಳು ಛಂಗನೆ ನೆಗೆದು, 'ಮಿಯಾಂವ್' ಎಂದು ಅರಚತೊಡಗಿದವು. ಬೆಕ್ಕುಗಳಿಗೆ ಇಲಿಗಳ ವಾಸನೆ ಹತ್ತಿ ಹುಡುಕತೊಡಗಿದವು.

ಐದು –ಹತ್ತು ನಿಮಿಷಗಳಲ್ಲಿ ಕಛೇರಿಯ ಮೂಲೆಯಿಂದ ಆರು ಇಲಿಗಳು ತಪ್ಪಿಸಿಕೊಳ್ಳುವ ಯತ್ನದಲ್ಲಿ ಓಡಿದವು. ಬೆಕ್ಕುಗಳೂ ಅವುಗಳ ಹಿಂದೆ ಓಡಿದವು.

ರಾಜೇಶ, ನಾಗಪ್ಪರಿಗೆ ತಾವು ಇಲಿಗಳಂತೆಯೂ, ಇನ್ಸ್‌ಪೆಕ್ಟರ್ ಬೆಕ್ಕಿನಂತೆಯೂ ಭಾಸವಾಗಿ ಇನ್ಸ್‌ಪೆಕ್ಟರ್ ತಮ್ಮ ಕೊರಳು ಹಿಸುಕುತ್ತಾನಲ್ಲ ಎಂದು ಭಯವಾಯಿತು.

ಇನ್ಸ್‌ಪೆಕ್ಟರ್‌ಗೆ ಇದನ್ನು ಹೇಗೆ ಮುಗಿಸಬೇಕೆಂಬುದರ ಸ್ಪಷ್ಟ ಕಲ್ಪನೆ ಇತ್ತು. ಮೊದಲು ರಾಜೇಶನ ಬಾಸ್‌ನತ್ತ ನೋಡಿ, 'ಎರಡು ಬೆಕ್ಕಿನಿಂದ ಆಗೋ ಕೆಲ್ಸ ನಿಮ್ಮಿಂದ ಆಗ್ಲಿಲ್ವಲ್ರೀ. ಯೂಸ್ಲೆಸ್ ಫೆಲೋ..' ಎಂದು ಉಗಿದರು.

ರಾಜೇಶ, ನಾಗಪ್ಪರತ್ತ ನೋಡಿ, 'ನಿಮ್ಮ ಲೆಕ್ಕಾಚಾರದ ಪ್ರಕಾರ ಒಂದು ಇಲಿಗೆ ಆರು ರೂಪಾಯಿ ಅಲ್ವಾ? ತಗೊಳ್ಳಿ, ಆರು ಇಲಿಗೆ ಮೂವತ್ತಾರು ರೂಪಾಯಿ. ಒಂದು ಲಕ್ಷ ತಂದು ಕೊಡಿ ಈಗಿಂದೀಗ್ಲೆ' ಎಂದ.

ಹತ್ತರ ಮೂರು ನೋಟುಗಳನ್ನು ಮೇಜಿನ ಮೇಲಿಟ್ಟು, ಒಂದೊಂದು ರೂಪಾಯಿಯ ನಾಣ್ಯವನ್ನು, 'ಒಂದು, ಎರಡು' ಎಂದು ಎಣಿಸುತ್ತಾ ಮೇಜಿನ ಮೇಲಿಡುತ್ತಾ ಹೋದರು. ರೂಪಾಯಿ ನಾಣ್ಯದ ಭಾರಕ್ಕೆ ಕುಗ್ಗುತ್ತಾ ರಾಜೇಶ, ನಾಗಪ್ಪರು ಪಾತಾಳಕ್ಕೆ ಕುಸಿದರು! ●